ಎಂ ವಿ ಸಿ ನಂ. 202/2024 - -

ಪಿ ಡಬ್ಲ್ಯೂ -1

ದಿನಾಂಕಃ 12.08.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ -

Discharge summary ಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. 28 ಮೆಡಿಕಲ್ ಬಿಲ್ಲುಗಳನ್ನು ಮತ್ತು 20 ವೈದ್ಯರ ಸಲಹಾ ಚೀಟಿಗಳನ್ನು ಹಾಜುರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 3 ಎಂದು ಗುರುತಿಸಲಾಯಿತು. X-Ray ವರದಿಯನ್ನು ನಿಪಿ-4 ಎಂದು, ಒಪಿಡಿ ದಾಖಲೆಯನ್ನು ನಿಪಿ-5 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದ -

ಅಪಘಾತವಾದ ಕೂಡಲೇ ಸಿ ಜಿ ಆಸ್ಪತ್ರೆಗೆ ಹೋಗಿರುತ್ತೇನೆ. ಹಾಗೂ ಆಸ್ಪತ್ರೆಯಲ್ಲಿ ನಾನು ಅಪಘಾತದ ಬಗ್ಗೆ ಹೇಳಿದ ವಿಚಾರಗಳು ಸತ್ಯವಾಗಿರುತ್ತದೆ. ಸದರಿ ದಿನ ನಾನು ಓಡಿಸುತ್ತಿದ್ದ ಬೈಕು ನನ್ನದಾಗಿರುತ್ತದೆ. ಸದರಿ ಬೈಕು ಓಡಿಸಲು ನಾನು ಡಿ ಎಲ್ ಹೊಂದಿದ್ದೇನೆ. ನಂತರ ಹೆಚ್ಚಿನ ಚಿಕಿತ್ಸೆಗೆ ಎಸ್ ಎಸ್ ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದು ಗುಣಮುಖನಾದ ನಂತರ ಆಸ್ಪತ್ರೆಯಿಂದ ಬಿಡುಗಡೆ ಹೊಂದಿರುತ್ತೇನೆ ಎಂದರೆ ಸರಿ. ಅದಾದ ನಂತರ ನಾನು ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ವೈದ್ಯಕೀಯ ದಾಖಲೆಗಳನ್ನು ಹೊರತುಪಡಿಸಿ ಬೇರೆ ದಾಖಲೆಗಳು ಇದೆಯಾ ಎಂದರೆ ಸಾಕ್ಷಿಯು ಇದೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

ನಾನು ಹಾಜರುಪಡಿಸಿರುವ ಬಿಲ್ಲುಗಳ ಪೈಕಿ ಬಿಲ್ ನಂ. 9, 13, 15 ಅಡ್ವಾನ್ಸ ಬಿಲ್ಲುಗಳು ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿ ಖರ್ಚು ಮಾಡಿದ ಬಿಲ್ ಮೊತ್ತ ಒಟ್ಟು 27135.00 ಎಂದರೆ ಸರಿ. ಅವುಗಳ ಪೈಕಿ ನಾನು ಕಟ್ಟಿದ ಅಡ್ವಾನ್ಸ ಬಿಲ್ಲನ್ನು ಕಳೆದು 14635.00 ರೂ ನ್ನು ಬಿಡುಗಡೆ ಹೊಂದುವ ಕಾಲಕ್ಕೆ ಕಟ್ಟಿದ್ದೇನೆ ಎಂದರೆ ಸರಿ. ನಾನು ಹೆಚ್ಚಿನ ಪರಿಹಾರ ಬರಲಿ ಎಂದು ಅಡ್ವಾನ್ಸ ಮೊತ್ತವನ್ನು ಸೇರಿ ಬಿಲ್ಲನ್ನು ಹಾಜುಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ಕಾಲಕ್ಕೆ ನಾನು ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದೆ. ಹಾಲಿ ವಿದ್ಯಾಭ್ಯಾಸ ಮುಗಿದಿದೆ. ಸದರಿ ಅಪಘಾತದಿಂದ ನನ್ನ ವಿದ್ಯಾಭ್ಯಾಸಕ್ಕೆ ತೊಂದರೆ ಆಗಿಲ್ಲ ಎಂದರೆ ಸರಿ. ಸದರಿ ಅಪಘಾತ ನನ್ನ ತಪ್ಪಿನಿಂದಲೇ ಆಗಿದ್ದರೂ ಸಹ 1 ನೇ ಎದುರುದಾರ ಕಾರನ್ನು ಈ ಪ್ರಕರಣದಲ್ಲಿ ಸೇರಿಸಿ ಪರಿಹಾರ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ 2.00 ಲಕ್ಷ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಅಂಗನ್ಯೂನತೆ ಆಗುವಂತಹ ಯಾವುದೇ ಗಾಯಗಳು ಆಗಿಲ್ಲ ಎಂದರೆ ಸರಿ. ನಾನು ಈ ಅರ್ಜಿಯನ್ನು ನಿಗಧಿತ ಅವಧಿಯೊಳಗೆ ಹಾಕದೆ ಇರುವ ಕಾರಣ ನಾನು ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ಹೋಗುತ್ತಿದ್ದ ಬೈಕಿಗೆ ವಿಮೆ ಇರಲಿಲ್ಲ ಹಾಗೂ ನನಗೆ ಡಿ ಎಲ್ ಇರದಿದ್ದರೂ ಸಹ ಪೊಲೀಸರ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ